**All India Radio: Bangalore**
**National Bulletin In Kannada**
**04.01.2026  1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**04.01.2026  1.10 pm**

**<>><><*><><<>**

ಮುಖ್ಯಾಂಶಗಳು

೧. ೨೦೧೪ ರ ನಂತರ ಭಾರತದ ಕ್ರೀಡಾ ಕ್ಷೇತ್ರ ಕ್ರಾಂತಿಕಾರಿ ಬದಲಾವಣೆಗೆ ಸಾಕ್ಷಿ- ಪ್ರಧಾನಿ ನರೇಂದ್ರ ಮೋದಿ

೨. ಉಪಾಧ್ಯಕ್ಷೆ ಡೆಲ್ಸಿ ರೊಡ್ರೆಗಸ್ ಅವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಿದ ವೆನೆಜ್ಯುವೆಲಾ ಸುಪ್ರೀಂಕೋರ್ಟ್ ಸಾಂವಿಧಾನಿಕ ಮಂಡಳಿ

೩. ಕಥುವಾದಲ್ಲಿ ಪ್ರವಾಹದಿಂದ ಹಾನಿಗೊಳಗಾದ ಕಟ್ಟಡಗಳ ಪುನರ್‌ನಿರ್ಮಾಣಕ್ಕೆ ಪರಿಹಾರ ನಿಧಿ ಹಂಚಿಕೆ ಪರಿಶೀಲಿಸಿದ ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್

೪. ೧೯ವರ್ಷದೊಳಗಿನವರ ಏಕದಿನ ಕ್ರಿಕೆಟ್ ಸರಣಿ; ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತಕ್ಕೆ ೨೫ ರನ್‌ಗಳ ಜಯ

*************

ಪ್ರಧಾನಿ ನರೇಂದ್ರ ಮೋದಿ ಇಂದು ೭೨ನೇ ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿಯನ್ನು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಉದ್ಘಾಟಿಸಿದರು. ನಂತರ ಮಾತನಾಡಿದ ಪ್ರಧಾನಿ, ೨೦೧೪ ರ ನಂತರ ಭಾರತ ಕ್ರೀಡಾ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಸಾಕ್ಷಿಯಾಗಿದೆ. ಕ್ರೀಡಾ ಬಜೆಟ್ ಹೆಚ್ಚಳ, ವೈಜ್ಞಾನಿಕ ತರಬೇತಿ ಮತ್ತು ಪಾರದರ್ಶಕ ಆಯ್ಕೆಯಿಂದಾಗಿ ಇಂದು ಭಾರತೀಯ ಕ್ರೀಡಾಪಟುಗಳು ಜಾಗತಿಕ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಬನಾರಸ್ ಕ್ರೀಡಾಪ್ರೇಮಿಗಳ ನೆಲೆಯಾಗಿದೆ. ವಾಲಿಬಾಲ್ ಎಂಬುದು ತಂಡದ ಸದಸ್ಯರ ನಡುವಿನ ಸಹಕಾರ ಮತ್ತು ಸಮತೋಲನದ ಆಟವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು. ಸ್ವಚ್ಛತೆಯಿಂದ ಹಿಡಿದು ಡಿಜಿಟಲ್ ಪಾವತಿಯವರೆಗೆ ಭಾರತ ಇಂದು ಮುಂಚೂಣಿಯಲ್ಲಿದೆ. ಇದಕ್ಕೆ ದೇಶದ

ಪ್ರತಿಯೊಬ್ಬ ಪ್ರಜೆಯೂ ತೋರುತ್ತಿರುವ ಸಾಂಘಿಕ ಹೊಣೆಗಾರಿಕೆಯೇ ಕಾರಣ ಎಂದು ಪ್ರಧಾನಿ ಮೆಚ್ಚುಗೆ ವ್ಯಕ್ತಪಡಿಸಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೧ ಸೆಕೆಂಡ್ಸ್)

ಈ ಉದ್ಘಾಟನಾ ಸಮಾರಂಭದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಭಾಗವಹಿಸಿದ್ದರು. ಈ ಪಂದ್ಯಾವಳಿ ಇಂದಿನಿಂದ ಇದೇ ೧೧ ರವರೆಗೆ ವಾರಣಾಸಿಯ ಡಾ.ಸಂಪೂರ್ಣಾನಂದ್ ಕ್ರೀಡಾಂಗಣದಲ್ಲಿ ನಡೆಯಲಿದೆ. ದೇಶಾದ್ಯಂತ ರಾಜ್ಯಗಳು ಮತ್ತು ಸಂಸ್ಥೆಗಳಿಂದ ೧ ಸಾವಿರಕ್ಕೂ ಹೆಚ್ಚು ಆಟಗಾರರನ್ನು ಒಳಗೊಂಡ ಸುಮಾರು ೬೩ ಪುರುಷ ಮತ್ತು ಮಹಿಳಾ ತಂಡಗಳು ಭಾಗವಹಿಸಲಿವೆ.

*************

ವೆನೆಜ್ಯುವೆಲಾ ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಮಂಡಳಿಯು, ಉಪಾಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ದೇಶದ ಹಂಗಾಮಿ ಅಧ್ಯಕ್ಷರ ಪಾತ್ರವನ್ನು ವಹಿಸಿಕೊಳ್ಳಬೇಕು ಎಂದು ಆದೇಶಿಸಿದೆ. ನಿನ್ನೆ ಅಮೆರಿಕ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ ನಿಕೋಲಸ್ ಮಡುರೋ ಅವರನ್ನು ಬಂಧಿಸಿದ ನಂತರ ಈ ನೀರ್ಧಾರ ತೆಗೆದುಕೊಳ್ಳಲಾಗಿದೆ. ಅಮೆರಿಕದ ಸಶಸ್ತ್ರ ಪಡೆಗಳಿಂದ ಬಂಧನಕ್ಕೊಳಗಾಗಿರುವ ವೆನೆಜ್ಯುವೆಲಾ ಅಧ್ಯಕ್ಷ ನಿಕೋಲಸ್ ಮಡುರೋ ಮತ್ತು ಅವರ ಪತ್ನಿ ಸಿಲಿಯಾ ಫ್ಲೋರೆಸ್ ಅವರಿಗೆ ಸಂಬಂಧಿಸಿದಂತೆ ಕಾನೂನು ಪ್ರಕ್ರಿಯೆಗಳು ಚುರುಕುಗೊಂಡಿವೆ. ಅಮೆರಿಕದ ಅಟಾರ್ನಿ ಜನರಲ್ ನೀಡಿರುವ ಮಾಹಿತಿಯಂತೆ ಮಡುರೋ ದಂಪತಿಯನ್ನು ನ್ಯೂಯಾರ್ಕ್‌ನ ಸದರ್ನ್ ಡಿಸ್ಟ್ರಿಕ್ಟ್‌ನಲ್ಲಿ ವಿಚಾರಣೆಗೊಳಪಡಿಸಲಾಗಿದೆ. ವೆನೆಜ್ಯುವೆಲಾ ಅಧ್ಯಕ್ಷ ನಿಕೋಲಸ್ ಮಡುರೊ ಮತ್ತು ಅವರ ಪತ್ನಿಯ ಮೇಲೆ ನಾರ್ಕೋ-ಟೆರರಿಸಂ ಮತ್ತು ಅಮೆರಿಕದ ವಿರುದ್ಧ ವಿಧ್ವಂಸಕ ಕೃತ್ಯಗಳ ಸಂಚು ರೂಪಿಸಿದ ಆರೋಪ ಹೊರೆಸಲಾಗಿದೆ. ವೆನೆಜುವೆಲಾದಲ್ಲಿ ಸುಸ್ಥಿರ ಸರ್ಕಾರ ಅಸ್ತಿತ್ವಕ್ಕೆ ಬರುವವರೆಗೆ ಅಮೆರಿಕವು ತಾತ್ಕಾಲಿಕವಾಗಿ ಅಲ್ಲಿನ ಆಡಳಿತವನ್ನು ನಡೆಸಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಅಮೆರಿಕದ ಈ ಕ್ರಮಕ್ಕೆ ವಿಶ್ವದಾದ್ಯಂತ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ರಷ್ಯಾ, ಚೀನಾ, ಇರಾನ್, ಬ್ರೆಜಿಲ್ ಮತ್ತು ಕ್ಯೂಬಾ ದೇಶಗಳು ಈ

ಕ್ರಮವನ್ನು ತೀವ್ರವಾಗಿ ಖಂಡಿಸಿವೆ. ಇದು ವೆನೆಜುವೆಲಾದ ಸಾರ್ವಭೌಮತ್ವದ ಉಲ್ಲಂಘನೆ ಮತ್ತು ಅಂತರಾಷ್ಟ್ರೀಯ ಕಾನೂನುಗಳ ನೇರ ಉಲ್ಲಂಘನೆ ಎಂದು ರಷ್ಯಾ ಮತ್ತು ಚೀನಾ ದೂರಿವೆ.

ಐರೋಪ್ಯ ಒಕ್ಕೂಟ, ಬ್ರಿಟನ್ ಮತ್ತು ಸ್ಪೇನ್ ನಾಯಕರು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ತಿಳಿಸಿದ್ದು, ಶಾಂತಿ ಮತ್ತು ಅಂತಾರಾಷ್ಟ್ರೀಯ ನಿಯಮಗಳ ಪಾಲನೆಗೆ ಒತ್ತು ನೀಡಿದ್ದಾರೆ.  ವೆನೆಜುವೆಲಾದ ವಿರೋಧ ಪಕ್ಷದ ನಾಯಕಿ ಮತ್ತು ನೊಬೆಲ್ ಪ್ರಶಸ್ತಿ ವಿಜೇತೆ ಮಾರಿಯಾ ಕೊರಿನಾ ಮಚಾಡೊ ಇದನ್ನು 'ಸ್ವಾತಂತ್ರ್ಯದ ಕ್ಷಣ' ಎಂದು ಬಣ್ಣಿಸಿದ್ದಾರೆ. ಮಡುರೊ ಅವರ ದೌರ್ಜನ್ಯದಿಂದ ದೇಶಕ್ಕೆ ಮುಕ್ತಿ ಸಿಕ್ಕಿದೆ ಎಂದು ಅವರು ತಿಳಿಸಿದ್ದಾರೆ.  ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ಈ ಬೆಳವಣಿಗೆಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ. ಅಂತಾರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆಯ ಚಾರ್ಟರ್ ಅನ್ನು ಗೌರವಿಸದಿರುವುದು ಕಳವಳದ ಸಂಗತಿಯಾಗಿದೆ ಎಂದು ಅವರು ಎಚ್ಚರಿಸಿದ್ದಾರೆ. ಈ ಕುರಿತು ಚರ್ಚಿಸಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ನಾಳೆ ತುರ್ತು ಸಭೆಯನ್ನು ಕರೆದಿದೆ. ವೆನೆಜುವೆಲಾದಲ್ಲಿನ ಉದ್ವಿಗ್ನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ತನ್ನ ನಾಗರಿಕರಿಗೆ ತುರ್ತು ಸಲಹೆಯನ್ನು ನೀಡಿದೆ. ಭಾರತೀಯರು ವೆನೆಜುವೆಲಾಗೆ ಅನಗತ್ಯ ಪ್ರಯಾಣ ಮಾಡದಿರಲು ಸಲಹೆ ನೀಡಿದ್ದು, ಈಗಾಗಲೇ ಅಲ್ಲಿರುವವರು ಕಾರಾಕಾಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರಬೇಕು ಎಂದು ಸೂಚಿಸಲಾಗಿದೆ.  ಕಚೇರಿಯೊಂದಿಗೆ ಸಂಪರ್ಕ ಸಾಧಿಸಲು ತುರ್ತು ದೂರವಾಣಿ ಸಂಖ್ಯೆ: +೫೮-೪೧೨-೯೫೮೪೨೮೮ ಬಳಸಲು ಕೋರಲಾಗಿದೆ.

*************

ವೆನೆಜುವೆಲಾದಲ್ಲಿ ನಡೆಯುತ್ತಿರುವ ಬಿಕ್ಕಟ್ಟಿನ ಮಧ್ಯೆ, ಟೆಸ್ಲಾ ಸಿಇಒ ಎಲೋನ್ ಮಸ್ಕ್, ಅಧ್ಯಕ್ಷ ನಿಕೋಲಸ್ ಮಡುರೊ ಅವರನ್ನು ಪದಚ್ಯುತಗೊಳಿಸಿದ ಅಮೆರಿಕದ ಕಾರ್ಯಾಚರಣೆಯ ನಂತರ, ಸ್ಪೇಸ್‌ಎಕ್ಸ್ ಒಡೆತನದ ಸ್ಟಾರ್‌ಲಿಂಕ್ ಫೆಬ್ರವರಿ ೩ ರವರೆಗೆ ವೆನೆಜುವೆಲಾದ ಜನರಿಗೆ ಉಚಿತ ಬ್ರಾಡ್‌ಬ್ಯಾಂಡ್ ಇಂಟರ್ನೆಟ್ ಸೇವೆಗಳನ್ನು ಒದಗಿಸುವುದಾಗಿ ಘೋಷಿಸಿದ್ದಾರೆ. ವೆನೆಜುವೆಲಾದಲ್ಲಿ ಬದಲಾಗುತ್ತಿರುವ ರಾಜಕೀಯ ಬೆಳವಣಿಗೆಗಳ ನಡುವೆ ಈ ಘೋಷಣೆ ಮಾಡಲಾಗಿದೆ. ಸಾಮಾಜಿಕ

ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಕಂಪನಿಯು, ಕ್ಯಾರಕಾಸ್‌ನ ಕೆಲವು ಭಾಗಗಳಲ್ಲಿ ಶನಿವಾರ ಹಠಾತ್ ಇಂಟರ್ನೆಟ್ ಸಂಪರ್ಕ ಕಡಿತಗೊಂಡ ವರದಿಗಳ ನಂತರ ವೆನೆಜುವೆಲಾಗೆ ನಿರಂತರ ಸಂಪರ್ಕವನ್ನು ನೀಡುವುದಾಗಿ ಭರವಸೆ ನೀಡಿದೆ.

*************

ಕಥುವಾದಲ್ಲಿ ಇತ್ತೀಚೆಗೆ ಸಂಭವಿಸಿದ ಹಠಾತ್ ಪ್ರವಾಹದಲ್ಲಿ ಹಾನಿಗೊಳಗಾದ ಕಟ್ಟಡಗಳ ಪುನರ್‌ನಿರ್ಮಾಣಕ್ಕೆ ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್ ಅವರು ಪರಿಹಾರ ನಿಧಿ ಹಂಚಿಕೆಯನ್ನು ಪರಿಶೀಲಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸಾರ್ವಜನಿಕ ಆಸ್ತಿ ಮತ್ತು ಮೂಲಸೌಕರ್ಯಕ್ಕೆ ಉಂಟಾದ ಹಾನಿಯನ್ನು ತಗ್ಗಿಸಲು ಕೇಂದ್ರ ಸರ್ಕಾರ ೧ ಸಾವಿರದ ೪೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಮಂಜೂರು ಮಾಡಿದೆ ಎಂದು ಕೇಂದ್ರ ಸಚಿವರು ತಿಳಿಸಿದ್ದಾರೆ. ಕಥುವಾದಲ್ಲಿ ತಾತ್ಕಾಲಿಕ ದುರಸ್ತಿಗಾಗಿ ಹತ್ತು ಕೋಟಿ ರೂಪಾಯಿ ನಿಧಿ ಮಂಜೂರು ಮಾಡಲಾಗಿದೆ. ಇತರ ಹಾನಿಗೊಳಗಾದ ಕಟ್ಟಡ ರಚನೆಗಳಿಗೆ ತಲಾ ಎರಡು ಕೋಟಿ ರೂಪಾಯಿ ನೀಡಲಾಗುವುದು ಎಂದು ಸಚಿವರು ಹೇಳಿದ್ದಾರೆ.

*************

೨೦೨೫ ಭಾರತದ ಅಭಿವೃದ್ಧಿ ಪಯಣದಲ್ಲಿ ಅತ್ಯಂತ ನಿರ್ಣಾಯಕ ವರ್ಷವಾಗಿದೆ. ಈ ವರ್ಷ ಹಲವು ನೀತಿಗಳು ಪ್ರಗತಿಯಾಗಿ ಮತ್ತು ಉದ್ದೇಶಗಳು ಪರಿಣಾಮವಾಗಿ ಪರಿವರ್ತನೆಗೊಂಡ ವರ್ಷವಾಗಿದೆ. ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ 'ಸುಧಾರಣೆಗಳ ವರ್ಷ' ಸರಣಿಯಲ್ಲಿ ಇಂದು ೨೦೨೫ರಲ್ಲಿ ದೇಶದ ಆರ್ಥಿಕತೆಯನ್ನು ಬಲಪಡಿಸುವ ದೃಢ ನಿರ್ಧಾರಗಳಿಂದ ಹಿಡಿದು ಅಂತಾರಾಷ್ಟ್ರೀಯ ಮಟ್ಟದ ರಾಜತಾಂತ್ರಿಕ ಚತುರತೆಯವರೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಶಕ್ತಿಶಾಲಿ ನಾಯಕತ್ವದ ಕುರಿತು ದೊರೆತ ಜಾಗತಿಕ ಮನ್ನಣೆಯ ಬಗ್ಗೆ ಒಂದು ವಿಶೇಷ ವರದಿ ಇಲ್ಲಿದೆ.

*************

೨೦೨೫ನೇ ವರ್ಷವು ಭಾರತದ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲಾಗಿ ದಾಖಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ದೇಶದ ನೀತಿಗಳು ಕೇವಲ ಕಾಗದದ

ಮೇಲೆ ಉಳಿಯದೆ, ಕ್ರಾಂತಿಕಾರಿ ಬದಲಾವಣೆಗಳಾಗಿ ಜಾರಿಗೆ ಬಂದಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವು ಇಂದು ವಿಶ್ವಾಸಾರ್ಹ ಶಕ್ತಿಯಾಗಿ ಗುರುತಿಸಿಕೊಂಡಿದೆ. ಆರ್ಥಿಕ ರಂಗದಲ್ಲಿ 'ರಾಷ್ಟ್ರ ಮೊದಲು' ಎಂಬ ತತ್ವಕ್ಕೆ ಬದ್ಧರಾದ ಪ್ರಧಾನಿಯವರು, ಅಮೆರಿಕದಂತಹ ದೊಡ್ಡ ರಾಷ್ಟ್ರಗಳು ಸುಂಕ ವಿಧಿಸಿದಾಗಲೂ ಮಣಿಯದೆ ದೇಶದ ಹಿತಾಸಕ್ತಿಯನ್ನು ಎತ್ತಿ ಹಿಡಿದರು. ಇದರೊಂದಿಗೆ ಕಾರ್ಮಿಕ ಸಂಹಿತೆ ಹಾಗೂ ಜಿಎಸ್‌ಟಿ ಬಲವರ್ಧನೆಯಂತಹ ಆಂತರಿಕ ಸುಧಾರಣೆಗಳು ಭಾರತದ ಜಿಡಿಪಿ ಬೆಳವಣಿಗೆಯನ್ನು ಶೇಕಡಾ ೮.೨ರಷ್ಟು ಏರಿಕೆ ಕಾಣುವಂತೆ ಮಾಡಿತು. ರಾಷ್ಟ್ರೀಯ ಭದ್ರತೆಯ ವಿಷಯದಲ್ಲಿ ಭಾರತವು ಇಂದು ತಳೆದ ಕಠಿಣ ನಿಲುವು ಜಗತ್ತಿಗೇ ಮಾದರಿಯಾಗಿದೆ. ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಕೈಗೊಂಡ 'ಆಪರೇಷನ್ ಸಿಂಧೂರ್' ಮತ್ತು ಸಿಂಧೂ ನದಿ ನೀರು ಹಂಚಿಕೆ ಒಪ್ಪಂದದ ಅಮಾನತು, ಭಯೋತ್ಪಾದನೆಯ ವಿರುದ್ಧ ಭಾರತದ ಕಠಿಣ ನೀತಿಯನ್ನು ಸಾರಿತು. ಮತ್ತೊಂದೆಡೆ, ಜಾಗತಿಕ ಮಟ್ಟದಲ್ಲಿ ಪ್ರಧಾನಿ ಮೋದಿಯವರ ಜನಪ್ರಿಯತೆ ಶಿಖರಕ್ಕೇರಿತು. ಬಾರ್ಬಡೋಸ್, ಮಾರಿಷಸ್ ಸೇರಿದಂತೆ ವಿವಿಧ ದೇಶಗಳಿಂದ ಸುಮಾರು ೨೯ ಅಂತಾರಾಷ್ಟ್ರೀಯ ಪ್ರಶಸ್ತಿಗಳು ಅವರಿಗೆ ಲಭಿಸಿದವು. ಬ್ರಿಟನ್, ಒಮಾನ್ ಮತ್ತು ಯುರೋಪಿಯನ್ ಮುಕ್ತ ವ್ಯಾಪಾರ ಸಂಘದೊಂದಿಗೆ ಮಾಡಿಕೊಂಡ ಐತಿಹಾಸಿಕ ಒಪ್ಪಂದಗಳು ಭಾರತೀಯ ವ್ಯಾಪಾರ ವಲಯಕ್ಕೆ ಜಾಗತಿಕ ಮಾರುಕಟ್ಟೆಯಲ್ಲಿ ಹೊಸ ಹೆಬ್ಬಾಗಿಲನ್ನು ತೆರೆದವು. ವಿಶ್ವಾದ್ಯಂತ ೧೮ ದೇಶಗಳ ಸಂಸತ್ತುಗಳನ್ನು ಉದ್ದೇಶಿಸಿ ಮಾತನಾಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರಬಲ ಧ್ವನಿಯಾಗಿ ಹೊರಹೊಮ್ಮಿದರು. ಆಸ್ಟ್ರೇಲಿಯಾದ ಪ್ರಧಾನಿ ಆಂತೋನಿ ಅಲ್ಬನೀಸ್, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹಾಗೂ ಭೂತಾನ್ ರಾಜರಂತಹ ನಾಯಕರು ತೋರಿದ ವಿಶೇಷ ಗೌರವವು ಭಾರತದ ಹೆಚ್ಚಿದ ರಾಜತಾಂತ್ರಿಕ ಘನತೆಗೆ ಸಾಕ್ಷಿಯಾಗಿದೆ. ಒಟ್ಟಾರೆಯಾಗಿ, ೨೦೨೫ನೇ ವರ್ಷವು ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವದಲ್ಲಿ ಭಾರತವು ಜಾಗತಿಕ ಸುವ್ಯವಸ್ಥೆಯನ್ನು ರೂಪಿಸುವ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಿದ ಸುವರ್ಣ ಕಾಲಘಟ್ಟವಾಗಿದೆ.

*************

ಬೆನೋನಿಯ ವಿಲ್ಲೋಮೂರ್ ಪಾರ್ಕ್‌ನಲ್ಲಿ ನಿನ್ನೆ ಸಂಜೆ ನಡೆದ ಮೂರು ಪಂದ್ಯಗಳ ಸರಣಿಯ ಮೊದಲ ೧೯ವರ್ಷದೊಳಗಿನವರ ಏಕದಿನ ಪಂದ್ಯದಲ್ಲಿ ಭಾರತ ತಂಡ, ಆತಿಥೇಯ ದಕ್ಷಿಣ

ಆಫ್ರಿಕಾವನ್ನು ಡಿಎಲ್‌ಎಸ್ ನಿಯಮದಡಿಯಲ್ಲಿ ೨೫ ರನ್‌ಗಳಿಂದ ಮಣಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು ಹರ್ವಂಶ್ ಪಂಗಾಲಿಯಾ ೯೩ ಮತ್ತು ಆರ್.ಎಸ್. ಅಂಬ್ರೀಶ್ ೬೫ ರನ್‌ಗಳ ನೆರವಿನಿಂದ ೫೦ ಓವರ್‌ಗಳಲ್ಲಿ ೩೦೦ ರನ್ ಗಳಿಸಿತು. ೩೦೧ ರನ್‌ಗಳ ಗುರಿಯನ್ನು ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ೨೭.೪ ಓವರ್‌ಗಳಲ್ಲಿ ೪ ವಿಕೆಟ್‌ಗಳಿಗೆ ೧೪೮ ರನ್ ಗಳಿಸಿದ್ದ ವೇಳೆ ಮಳೆಯಿಂದ ಆಟಕ್ಕೆ ಅಡ್ಡಿ ಉಂಟಾಯಿತು. ಪಂದ್ಯ ಪುನರಾರಂಭಿಸಲು ಸಾಧ್ಯವಾಗದ ಕಾರಣ ಭಾರತವನ್ನು ಡಿಎಲ್‌ಎಸ್ ನಿಯಮದಡಿಯಲ್ಲಿ ವಿಜೇತರು ಎಂದು ಘೋಷಿಸಲಾಯಿತು. ಈ ತಿಂಗಳ ೧೫ ರಂದು ಪ್ರಾರಂಭವಾಗುವ ಐಸಿಸಿ ೧೯ವರ್ಷದೊಳಗಿನವರ ವಿಶ್ವಕಪ್‌ಗೆ ಮುಂಚಿತವಾಗಿ ಎರಡೂ ತಂಡಗಳು ಈ ಸರಣಿಯನ್ನು ಸಿದ್ಧತೆಯಾಗಿ ಪರಿಗಣಿಸಿವೆ. ವೈಭವ್ ಸೂರ್ಯವಂಶಿ ಈ ಸರಣಿಯಲ್ಲಿ ಭಾರತ ತಂಡವನ್ನು ಮುನ್ನಡೆಸುತ್ತಿದ್ದಾರೆ.

*************